ಸಕಾಲಿಕ ಕಾರ್ಯಾಚರಣೆಯಿಂದ ದಿವ್ಯಜ್ಯೋತಿ ಬರೂವರನ್ನು ಬಂಧಿಸಿ ಮುಂದಿನ ಕ್ರಮ ಜರುಗಿಸಲಾಗಿದೆ.

ಪಾಲಿ ದಿವ್ಯಜ್ಯೋತಿ ಬರೂವರನ್ನು ಚಿಕ್ಕಮಗಳೂರು ಸಬ್‌ಜೈಲಿನಲ್ಲಿ ಪೋಲೀಸ್ ಕಸ್ಟಡಿಯಲ್ಲಿಟ್ಟಿರುತ್ತಾರೆ. ಈ ಹಿಂದೆ ಇವರು ಜಾಮೀನಿನ ಮೇಲೆ ಬಿಡುಗಡೆ ಹೊಂದಲು ಕರ್ನಾಟಕ ಶ್ರೇಷ್ಠ ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಯು ದಿನಾಂಕ ೩೦-೪-೧೯೮೮ರಂದು ತಿರಸ್ಕೃತವಾಗಿರುವುದಾಗಿ ತಿಳಿದು ಬಂದಿದೆ. ಆದರೆ ಇವರು ಮಾನಸಿಕ ಕ್ಷೋಭೆಗೆ ಒಳಗಾಗಿರುವುದಾಗಿ ಇವರನ್ನು ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಶುಶ್ರೂಷೆಗೆ ನೀಡಲು ಕರೆದುಕೊಂಡು ಹೋಗಲಾಂ ಇವರ ತಂದೆಯವರು ಕೋರಿರುವ ಹಿನ್ನೆಲೆ ಏನು ?

ಬೆಂಗಳೂರಿನ ನಿಮಾನ್ಸ್‌ನಲ್ಲಿ ತಜ್ಞ ವೈದ್ಯರು ಪರೀಕ್ಷಿಸಿ ಇವರಿಗೆ ಯಾವುದೇ ಮಾನಸಿಕ ರೋಗ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಯಾವುದೇ ರೀತಿಯ ಮಾನಸಿಕ ವ್ಯಾಧಿಯನ್ನು ಗುಣಪಡಿಸಲು ಎಲ್ಲಾ ಸೌಕರ್ಯ ಮತ್ತು ಸಲಕರಣೆಗಳನ್ನೂ ನಿಮಾನ್ಸ್ ಹೊಂದಿರುವುದಾಗಿ ಅಲ್ಲಿನ ನಿರ್ದೇಶಕರಂ ತಿಳಿಸಿದ್ದಾರೆ. ಹೀಗಿದ್ದಾಗ್ಯೂ ಸಹ ದಿವ್ಯಜ್ಯೋತಿ ಬರೂವರನ್ನು ದೆಹಲಿಗೆ ಕರೆದುಕೊಂಡು ಹೋಗಲಿರುವ ಔಚಿತ್ಯ ಮತ್ತು ಅಗತ್ಯ ಏನು ? ಬರೂವರವರನ್ನು ದೆಹಲಿಗೆ ಕಳುಹಿಸಲು ಈಗಾಗಲೇ ಗೃಹ ಇಲಾಖೆಯಿಂದ ಸರ್ಕಾರಿ ಆದೇಶ ಹೊರಡಿಸಿರುವುದಾಗಿ ತಿಳಿಯಬಂದಿದೆ. ಈ ಆದೇಶ ಹೊರಡಿಸುವ ಉದ್ದೇಶವೇನು ? ಅಸ್ಸಾಂ-ಕರ್ನಾಟಕ ಬಹಳ ದೂರವಿರುವುದರಿಂದ ದೆಹಲಿಗೆ ಕರೆದುಕೊಂಡು ಹೋಗಿ ಅಲ್ಲಿ ಚಿಕಿತ್ಸೆ ನೀಡುವುದಾಗಿ ತಂದೆ ಶ್ರೀ ಪ್ರೇಮ ಬರೂವ ತಿಳಿಸಿರುವ ಹಿನ್ನೆಲೆ ಏನು ? ಇದುವರೆವಿಗೂ ಪ್ರಾಮಾಣಿಕವಾಗಿ ಸಕಾಲಿಕವಾಗಿ ಕೇಸನ್ನು ಪತ್ತೆ ಹಚ್ಚಿ ದಾಖಲು ಮಾಡಿರುವ ಪೋಲೀಸ್ ಇಲಾಖೆಗೆ ಮುಂದು ಇನ್ನೂ ಹೆಚ್ಚಿನ ಮಾಹಿತಿ ಸಂಗ್ರಹಿಸಲು ತೊಡಕಾಗುವುದಿಲ್ಲವೆ ? ಇದರಿಂದ ನ್ಯಾಯ ದೊರಕಿಸಲು ಅನಾನುಕೂಲವಾಗುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಪ್ರಶ್ನೆಗೆ ಪೂರ್ಣ ಉತ್ತರವನ್ನು ತರಿಸಿಕೊಡುತ್ತೇನೆ

ಶ್ರೀ ಎಚ್. ಜಿ. ಗೋವಿಂದೇಗೌಡ.—ಸೋಮವಾರದ ಒಳಗಾಗಿ ಇದಕ್ಕೆ ಉತ್ತರವನ್ನು ಕೊಡುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಶ್ರೀ ಎಂ. ಎಸ್. ಕೃಷ್ಣನ್‌ರವರು ತಂದಿರುವ ಖಾಸಗೀ ನಿರ್ಣಯದ ಮೇಲಿನ ಚರ್ಚೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೂವ್ ಮಾಡುವ ಕೃಷ್ಣನ್‌ರವರೇ ಬಂದಿಲ್ಲವಲ್ಲ.

ಅಧ್ಯಕ್ಷರು.—ಚರ್ಚೆ ಶುರು ಮಾಡಿ ಯಾರಾದರೂ

ಶ್ರೀ ಯು. ಭೂಪತಿ.—ಒಂದೇ ಸಲ ಓಟಿಗೆ ಹಾಕಿಬಿಡಿ ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲದಿದ್ದರೆ ವಿಥ್‌ಡ್ರಾ ಮಾಡಿಕೊಂಡು ಬಿಡಿ.

ಅಧ್ಯಕ್ಷರು.—ನೆಕ್ಸ್ಟ್ ವೀಕ್ ತೆಗೆದುಕೊಳ್ಳೋಣ. ಈಗ ಸಭೆಯು ಮುಕ್ತಾಯವಾಯಿತು. ಮತ್ತೆ ಸಭೆಯು ೨೩-೫-೧೯೮೮ರ ಸೋಮವಾರದಂದು ಬೆಳಿಗ್ಗೆ ೧೧ ಗಂಟೆಗೆ ಸೇರುವುದು.

(ಸಭೆಯು ೧೨-೪೨ಕ್ಕೆ ಮುಕ್ತಾಯಂವಾಗಿ ದಿನಾಂಕ ೨೩-೫-೧೯೮೮ರ ಸೋಮವಾರ ೧೧-೦೦ ಗಂಟೆಗೆ ಪುನಃ ಸೇರಲು ನಿರ್ಧರಿಸಲಾಯಿತು.)